## <u>ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್</u>:

ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ **ಅವರ ವಾಸ ಸ್ಥಳದಿಂದ ಶೈಕ್ಷಣಿಕ ಸಂಸ್ಥೆಗೆ 60 ಕಿ.ಮೀ ವರೆಗೆ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ**. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಹಾಗೂ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಬಸ್ ಪಾಸ್ ದರದಲ್ಲಿ ಶೇ.25 ರಷ್ಟು ರಿಯಾಯಿತಿ ದರದಲ್ಲಿ ಬಸ್ ಪಾಸುಗಳನ್ನು ನೀಡಲಾಗುತ್ತಿದೆ. ಪ್ರಸ್ತುತ ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವ ಬಸ್ ಪಾಸ್‌ಗಳ ದರಗಳ ವಿವರಗಳನ್ನು **<u>ಅನುಬಂಧ-3</u>** ರಂತೆ ಲಗತ್ತಿಸಿದೆ.

### <u>ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ಪಡೆಯಲು ಸಲ್ಲಿಸಬೇಕಾದ ದಾಖಲಾತಿಗಳು.</u>

1. ಸರಿಯಾಗಿ ಭರ್ತಿ ಮಾಡಿ ಪ್ರಾಂಶುಪಾಲರಿಂದ ದೃಢೀಕರಿಸಿದ ಅರ್ಜಿ.
2. ಶಾಲಾ/ಕಾಲೇಜಿನಲ್ಲಿ ಪ್ರವೇಶ ಪಡೆದ ಬಗ್ಗೆ ಶುಲ್ಕ ಪಾವತಿ ರಶೀದಿ.(ಮೂಲ ಹಾಗೂ ಝರಾಕ್ಸ್ ಪ್ರತಿ)
3 ಮನೆ ವಿಳಾಸಕ್ಕೆ ಸಂಬಂಧಿಸಿದಂತೆ ಕುಟುಂಬ ಪಡಿತರ ಚೀಟಿ/ ದೂರವಾಣಿ/ವಾಸಸ್ಥಳ ಪ್ರಮಾಣ ಪತ್ರ/ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
4. ಇತ್ತೀಚಿನ 3 ಬಣ್ಣದ ಭಾವಚಿತ್ರಗಳು (ಸ್ಟ್ಯಾಂಪ ಅಳತೆ).

## ಅನುಬಂಧ-3

## ವಿವಿಧ ದರ್ಜೆಯ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸುಗಳ ವಿವರ

( ರೂ.ಗಳಲ್ಲಿ)

| ಕ್ರ.ಸಂ | ಪಾಸುಗಳ ವಿವರ | ನಿಗದಿತ ಅವಧಿ | ಹಾಲಿ ದರ |
|---|---|---|---|
| 1 | 7 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ | ಉಚಿತ |
| 2 | ಹೈಸ್ಕೂಲ್ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ | 600.00 |
| | | 5 ತಿಂಗಳಿಗೆ | 300.00 |
| 3 | ಹೈಸ್ಕೂಲ್ ವಿದ್ಯಾರ್ಥಿನಿಯರಿಗೆ | 10 ತಿಂಗಳಿಗೆ | 400.00 |
| | | 5 ತಿಂಗಳಿಗೆ | 200.00 |
| 4 | ಕಾಲೇಜು & ಡಿಪ್ಲೊಮಾ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ | 900.00 |
| | | 5 ತಿಂಗಳಿಗೆ | 450.00 |
| 5 | ಐ.ಟಿ.ಐ ವಿದ್ಯಾರ್ಥಿಗಳಿಗೆ | 12 ತಿಂಗಳಿಗೆ | 1150.00 |
| | | 6 ತಿಂಗಳಿಗೆ | 575.00 |
| 6 | ವೃತ್ತಿಪರ ಕೋರ್ಸಗಳಾದ ವೈದ್ಯಕೀಯ/ ಇಂಜಿನಿಯರಿಂಗ್, ಇತರೆ ವಿದ್ಯಾರ್ಥಿಗಳಿಗೆ. | 10 ತಿಂಗಳಿಗೆ | 1400.00 |
| | | 5 ತಿಂಗಳಿಗೆ | 700.00 |
| 7 | ಸಂಜೆ ಕಾಲೇಜು/ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ. | 10 ತಿಂಗಳಿಗೆ. | 1200.00 |